ದಿನಾಂಕಃ 09.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

## ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಎಮ್.ಆರ್ ಎಲ್. ಅವರಿಂದ –

1. ನನ್ನ ತಂದೆ ಹೆಸರು ದೇವಯ್ಯ. ನನ್ನ ತಂದೆಗೆ 4 ಜನ ಮಕ್ಕಳು 1. ದೊಡ್ಡಯ್ಯ 2. ಈರಯ್ಯ 3. ತಮ್ಮಯ್ಯ 4. ಪುಟ್ಟಸ್ವಾಮಿ ಅಂದರೆ ನಾನು. ದೊಡ್ಡಯ್ಯ ಎಂದರೆ 1 ನೇ ಪ್ರತಿವಾದಿ ಗಂಡ ಎಂದರೆ ಸರಿ. ನಾನು ಎಸ್.ಎಸ್.ಎಲ್.ಸಿ. ಓದಿದ್ದೇನೆ. ನಾನು ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಸುಳ್ಳು ದಾಖಲಾತಿಗಳ ಮೇಲೆ ಸಹಿ ಮಾಡುವ ಅಭ್ಯಾಸ ಇರುವುದಿಲ್ಲ. ವಾದಪತ್ರವನ್ನು ನಮ್ಮ ವಕೀಲರು ಬರೆಯಿಸಿ ಹಾಕಿರುತ್ತಾರೆ. ವಾದಪತ್ರದ ಒಕ್ಕಣೆಯನ್ನು ಬರೆಯಲು ನಮ್ಮ ವಕೀಲರು ಮಾಹಿತಿ ನೀಡಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಒಕ್ಕಣೆಯನ್ನು ನಮ್ಮ ವಕೀಲರು ಬರೆಯಿಸಿ ಹಾಕಿರುತ್ತಾರೆ.

3. ನಾವು 4 ಜನ ಅಣ್ಣತಮ್ಮಂದಿರು ಆಸ್ತಿಯನ್ನು ಸಮನಾಗಿ ಹಂಚಿಕೊಂಡಿರುತ್ತೇವೆ ಎಂದರೆ ಸರಿ. ಅದರಂತೆ ಕಂದಾಯ ದಾಖಲಾತಿಗಳು ಖಾತೆಯಾಗಿರುತ್ತವೆ ಎಂದರೆ ಸರಿ. ಅದೇ ಪ್ರಕಾರ ನಾವು ಸ್ವಾಧೀನಾನುಭವದಲ್ಲಿದ್ದೇವೆ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ 50 ವರ್ಷಗಳ ಹಿಂದೆಯೆ ಭಾಗ ಮಾಡಿಕೊಂಡಿರುತ್ತೇವೆ ಎಂದು ಹೇಳಿ ಬರೆಯಿಸಿರುತ್ತೇವೆ ಎಂದರೆ ಸರಿ. ಅದರಂತೆ ಸ್ಥಳ ಮಹಜರ್ ಮಾಡಿಸಿ ಖಾತೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

4. ದೊಡ್ಡಯ್ಯ, ಈರಯ್ಯ, ತಮ್ಮಯ್ಯ ಹಾಗೂ ಪುಟ್ಟಸ್ವಾಮಿ ಇವರು ದೇವಯ್ಯನ ಮಕ್ಕಳು ಎಂದರೆ ಸರಿ. ಸದರಿಯವರು ತಹಸಿಲ್ದಾರ್, ಹುಣಸೂರು ಅವರಿಗೆ ಅರ್ಜಿ

ನೀಡಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿ ಮೇರೆಗೆ ಸರಕಾರಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳ ಪರಿಶೀಲನೆ ಮಾಡಿದ ದಾಖಲಾತಿ ಮೇಲೆ ನಮ್ಮ ಸಹಿ ಇವೆ ಎಂದರೆ ಆ ವರ್ಷದಲ್ಲಿ ಕಂದಾಯ ಅಧಿಕಾರಿಗಳು ಕಚೇರಿಯಲ್ಲಿ ನಮ್ಮ ಸಹಿ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿಯವರು ಸ್ಥಳ ಪರಿಶೀಲನೆ ಮಾಡಲು ಬರುವ ಮೊದಲು ನೋಟೀಸ್ ಜಾರಿ ಮಾಡಿರುತ್ತಾರೆ ಎಂದರೆ ನೋಟೀಸ್ ಗೆ ಕಂದಾಯ ಅಧಿಕಾರಿಗಳು ಕಚೇರಿಯಲ್ಲಿ ನಮ್ಮ ಸಹಿ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

5. ಈ ಹಂತದಲ್ಲಿ ಸಾಕ್ಷಿದಾರರಿಗೆ ಒಂದು ಅರ್ಜಿಯನ್ನು ತೋರಿಸಿ, ಇದೇ ಅರ್ಜಿ ನಾವು ಕೊಟ್ಟಿರುವ ಅರ್ಜಿ ಎಂದರೆ ಸರಿಯಲ್ಲ. ನಾವು ಸಹಿ ಮಾಡಿದ ಸಮಯದಲ್ಲಿ ಎಲ್ಲಾ ವಿಚಾರಗಳು ನಮ್ಮ ಗಮನಕ್ಕೆ ಬಂದಿದ್ದವು ಎಂದರೆ ಸರಿಯಲ್ಲ. ನಾವು ಸ್ವಾಧೀನಾನುಭವದಲ್ಲಿದ್ದ ಪ್ರಕಾರ ನಮ್ಮ ಹೆಸರಿಗೆ ಖಾತೆ ಮಾಡಿದ್ದಾರೆ ಎಂದರೆ ಅದನ್ನು ಮಾಡುವುದು ಬೇಡ ಎಂದು ನಾವು ಹೇಳಿದ್ದೇವು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಖಾತೆ ಬಗ್ಗೆ ನಾವು ವಿಚಾರಿಸಿರುವುದಿಲ್ಲ, ಏಕೆಂದರೆ ಅದನ್ನು ಗೌಪ್ಯವಾಗಿ ಇಡಲಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ನಾನೇ ಕಂದಾಯ ಕಟ್ಟಿರುತ್ತೇನೆ. ಆದರೆ ಪ್ರತಿವರ್ಷ ಕಟ್ಟಿಲ್ಲ.

**6.** ನಾನು **50** ವರ್ಷಕ್ಕಿಂತ ಮೊದಲಿನಿಂದಲೂ ನಾನೇ ಕಂದಾಯ ಕಟ್ಟಿರುತ್ತೇನೆ. ಆ ಸಮಯ ಆರ್ ಟಿ ಸಿ ಯಾರ ಹೆಸರಿನಲ್ಲಿವೆ ನನಗೆ ಗೊತ್ತಿತ್ತು ಎಂದರೆ ಮಧ್ಯೆ ನಮಗೆ ಬೇಕಾದಾಗ ನಾವು ಆರ್ ಟಿ ಸಿ ತೆಗೆದುಕೊಂಡಾಗ ನಮಗೆ ಗೊತ್ತಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಆರ್ ಟಿ ಸಿ ಯಾರ ಹೆಸನಲ್ಲಿದೆ ಎಂದು ನನಗೆ 20 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಈ ಬಗ್ಗೆ ನಾನು ಪ್ರಶ್ನೆ ಮಾಡಿರುತ್ತೇನೆ. ಈ ಬಗ್ಗೆ ನಾನು ಗ್ರಾಮಲೆಕ್ಕಾಧಿಕಾರಿ ಬಳಿ **5** ವರ್ಷಗಳ ಹಿಂದೆ ಹೋಗಿ ವಿಚಾರಿಸಿದ್ದೆ. ಮಧ್ಯೆ ಮಧ್ಯೆ ಸಹ ಹೋಗಿ ವಿಚಾರಿಸುತ್ತಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಈಗ ನೀವು ಸಮಭಾಗ ಮಾಡಿಕೊಂಡಿದ್ದೀರಾ ಅದಕ್ಕೆ ಏನೂ ತೊಂದರೆ ಇಲ್ಲ ಮಾಡಿಕೊಂಡು ಹೋಗಿ ಎಂದು

ಅಧಿಕಾರಿಗಳು ತಿಳಿಸಿದ್ದರು. ಈಗ ನಾವು ಯಾವ ತರಹ ಅನುಭೋಗದಲ್ಲಿದ್ದೇವೆ ಆ ರೀತಿ ಖಾತೆ ಮಾಡಿಕೊಳ್ಳಲು ಹೋದಾಗ, ಅದನ್ನು 1ನೇ ಪ್ರತಿವಾದಿ ವಿರೋಧಿಸಿದ್ದರು. ಆದ್ದರಿಂದ ನಾನು ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ .

7. ನಾನು ಹಾಗೂ ನನ್ನ ಸಹೋದರರು ಚೆನ್ನಾಗಿದ್ದೇವೆ ಎಂದರೆ ಸರಿ. ನಾನು ನೀಡಿರುವ ಚೆಕ್ಕುಬಂದಿ ಪ್ರಕಾರ ನಾನು ಸ್ವಾಧೀನ ಹೊಂದಿರುತ್ತೇನೆ ಎಂದು ತೋರಿಸಲು ನೋಟರಿ ಅವರ ಬಳಿ ದಾಖಲಾತಿಗಳನ್ನು ಮಾಡಿಸಿ ಹಾಗೂ ಸರ್ವೇಯರ್ ಕಡೆಯಿಂದ ಪಡೆದ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿರುವ ಚೆಕ್ಕುಬಂದಿ ಪ್ರಕಾರ ನಾನು ಸ್ವಾಧೀನಾನುಭವದಲ್ಲಿಲ್ಲ ಎಂದರೆ ಸರಿಯಲ್ಲ.

8. ದಾವಾ ಐಟಂ ಸಂ.1 ರಲ್ಲಿ ಪೂ- ಚನ್ನಗಿರಾಯ ಅವರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಚನ್ನಗಿರಾಯ ಅವರ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಎಜ್ಜಿಗರಾಯ ಅವರ ಜಮೀನಿನ ವಿಸ್ತೀರ್ಣ ಹಾಗೂ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಉತ್ತರಕ್ಕಿರುವ ತಮ್ಮಯ್ಯ ಹಾಗೂ ದಕ್ಷಿಣಕ್ಕಿರುವ ಅಪ್ಪಣ್ಣಯ್ಯ ಅವರ ಅವರ ಜಮೀನಿನ ವಿಸ್ತೀರ್ಣ ಹಾಗೂ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

9. ದಾವಾ ಐಟಂ ಸಂ.2 ರಲ್ಲಿ ಪೂರ್ವಕ್ಕೆ ವೆಂಕಟೇಶ್ವರ, ಪ-ನಂಜಿದೇವಯ್ಯ, ಉ- ಈರಯ್ಯ, ದ-ತಮ್ಮಯ್ಯರವರುಗಳ ಜಮೀನಿನ ವಿಸ್ತೀರ್ಣ ಹಾಗೂ ಅವುಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಐಟಂ ಸಂ.3 ರಲ್ಲಿ ಪೂ- ವೆಂಕಟೇಶ್ವರ, ಪ- ಬಚ್ಚಯ್ಯ, ಉ- ಲಕ್ಕಿಕುಂಟಯ್ಯ, ದ- ಪುಟ್ಟನಂಜಮ್ಮ ರವರುಗಳ ಜಮೀನಿನ ವಿಸ್ತೀರ್ಣ ಹಾಗೂ ಅವುಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

10. ಪೂ-ಚೆನ್ನಗಿರಾಯ, ಪ- ಎಜ್ಜುರಯ್ಯ, ಉ- ಪುಟ್ಟನಂಜಮ್ಮ, ದ-ಡಿ.ಪುಟ್ಟಸ್ವಾಮಿ ಎಂದು ನಮೂದು ಮಾಡಿದ್ದು, ಸದರಿಯವರುಗಳ ಜಮೀನಿನ ವಿಸ್ತೀರ್ಣ ಹಾಗೂ

ಅವುಗಳ ಚೆಕ್ಕುಬಂದಿ ನನಗೆ ಗೊತ್ತಿದೆ. ಬೇರೆಯವರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ವಿಸ್ತೀರ್ಣ ನನಗೆ ಗೂತ್ತು.

11. 1ನೇ ಪ್ರತಿವಾದಿ ಪುಟ್ಟನಂಜಮ್ಮ ಅವರ ಜವೀನಿನ ವಿಸ್ತೀರ್ಣ 1 ಎಕರೆ 26 ಗುಂಟೆ ಇದೆ. ಅದೇ ರೀತಿ ನನ್ನ ಜಮೀನಿನ ವಿಸ್ತೀರ್ಣ 1 ಎಕರೆ 28 ಗುಂಟೆ ಇದೆ. ನನ್ನ ಜಮೀನಿನ ಚೆಕ್ಕುಬಂದಿ ಪೂ– ಚೆನ್ನಗಿರಾಯ ಪ– ಎಜ್ಜುರಯ್ಯ ಉ–ತಮ್ಮಯ್ಯ ಹಾಗೂ ದ– ಅಪ್ಪಣ್ಣಯ್ಯ. ಸದರಿ ಚೆಕ್ಕುಬಂದಿ ಮಧ್ಯದಲ್ಲಿರುವ ಜಮೀನಿಗೆ ನಾವು ಸ್ವಾಧೀನದಲ್ಲಿದ್ದವೇ ಎಂದು ತೋರಿಸಲು ಆರ್ ಟಿ ಸಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಆರ್ ಟಿ ಸಿ ಪ್ರಕಾರ ನೀವು ಸ್ವಾಧೀನದಲ್ಲಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಸುಳ್ಳು ಚೆಕ್ಕುಬಂದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲು: ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.